ಆದರೆ ಈ ಅಪಾಯವು ಭಕ್ತಿಯ ಕೆಳಗಿನ ಸ್ತರದಲ್ಲಿ ಇರುತ್ತದೆ ಎಂದು ಸ್ವಾಮೀಜಿ ಅಭಿಪ್ರಾಯ ಪಡುತ್ತಾರೆ.

> **ಶಾಶ್ವತವಾದ ಭಕ್ತಿ ಬೇಕಾದರೆ, ದ್ವೇಷಭಾವನೆಯನ್ನು ತ್ಯಜಿಸಿ. ದ್ವೇಷಭಾವನೆ ಭಕ್ತಿಗೆ ದೊಡ್ಡ ಆತಂಕ. ಯಾರನ್ನೂ ದ್ವೇಷಿಸದವನು ಮಾತ್ರವೇ ದೇವರನ್ನು ಸೇರುವನು.**
> **– ಸ್ವಾಮಿ ವಿವೇಕಾನಂದ**

## ಗೌಣೀ ಭಕ್ತಿ

ಭಕ್ತಿಯಲ್ಲಿ ಗೌಣೀ ಮತ್ತು ಪರಾ ಎಂದು ಎರಡು ವಿಧ. ಗೌಣೀ ಸ್ಥಿತಿಯಲ್ಲಿ ಇರುವಾಗ ಹೊರಗಿನ ಸಾಧನಗಳನ್ನು ಅವಲಂಬಿಸಿ ಭಕ್ತನು ಮುಂದುವರಿಯುತ್ತಾನೆ. ಆದರೆ ಪರಾಭಕ್ತಿಯಲ್ಲಿ ಭಕ್ತಿಯು ಅವನ ಸ್ವಭಾವವೇ ಆಗಿಬಿಡುತ್ತದೆ. ಶ್ರೀರಾಮಾನುಜಾಚಾರ್ಯರು **ವಿವೇಕ, ವಿಮೋಕ, ಅಭ್ಯಾಸ, ಕ್ರಿಯಾ, ಕಲ್ಯಾಣ, ಅನವಸಾದ, ಉದ್ಧರ್ಷ** – ಇವುಗಳಿಂದ ಭಕ್ತಿ ಲಭಿಸುತ್ತದೆ ಎನ್ನುತ್ತಾರೆ. ವಿವೇಕ ಎಂದರೆ, ಇತರ ವಸ್ತುಗಳ ವಿವೇಕದೊಂದಿಗೆ ಆಹಾರದ ಬಗ್ಗೆ ಎಚ್ಚರಿಕೆಯೂ ಸೇರುತ್ತದೆ. ಶ್ರೀಶಂಕರಾಚಾರ್ಯರು, ನಾವು ಇಂದ್ರಿಯಗಳಿಂದ ತೆಗೆದುಕೊಳ್ಳುವ ಎಲ್ಲವೂ ಆಹಾರವೇ ಎನ್ನುತ್ತಾರೆ. ವಿಮೋಕವೆಂದರೆ ಆಸೆಗಳಿಂದ ಬಿಡುಗಡೆ. ಅಭ್ಯಾಸವೆಂದರೆ ಶ್ರಮಪಟ್ಟು ಸಾಧನೆ ಮಾಡುವುದು. ಕ್ರಿಯೆ ಎಂದರೆ ಭಗವಂತನಿಗೆ ನಮ್ಮೆಲ್ಲ ಕ್ರಿಯೆಗಳನ್ನೂ ಅರ್ಪಿಸುವುದು. ಕಲ್ಯಾಣ ಎಂದರೆ ಬಾಹ್ಯ ಮತ್ತು ಆಂತರಿಕ ಪಾವಿತ್ರ್ಯ. ಅನವಸಾದ ಎಂದರೆ ಶಕ್ತಿಯ ಭಾವನೆ. ಉದ್ಧರ್ಷ ಎಂದರೆ ಮಿತಿಮೀರಿದ ಸಂತೋಷವನ್ನು ತಡೆಹಿಡಿಯುವುದು. ಗೌಣೀಭಕ್ತಿಯ ಅವಸ್ಥೆಯಲ್ಲಿ ಸಾಧಕನು ಪ್ರತೀಕಗಳ ಸಹಾಯವನ್ನು ಪಡೆದುಕೊಳ್ಳುತ್ತಾನೆ. ಆ ಮೂಲಕ ತನ್ನ ಭಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಾನೆ.

## ಪರಾಭಕ್ತಿ

ಪರಾಭಕ್ತಿಯ ವಿಷಯವಾಗಿ ದೇವೀಭಾಗವತವು ಈ ವಿವರಣೆಯನ್ನು ಕೊಡುವುದು: "ಒಂದು ಪಾತ್ರೆಯಿಂದ ಇನ್ನೊಂದು ಪಾತ್ರೆಗೆ ಎಣ್ಣೆಯನ್ನು ಸುರಿದಾಗ ಹೇಗೆ ಅವಿಚ್ಛಿನ್ನ ಧಾರೆಯಂತೆ ಇರುವುದೋ, ಹಾಗೆ ಮನಸ್ಸು ನಿರಂತರವಾಗಿ, ಅಗಲಿಕೆಯನ್ನೇ ಅರಿಯದೆ, ಆಸಕ್ತಿಯಿಂದ ಮನೋಬುದ್ಧಿಗಳ ಮೂಲಕ ಭಗವಂತನನ್ನು ಚಿಂತಿಸುತ್ತಿದ್ದರೆ ಅದೇ ಪರಾಭಕ್ತಿ." ಇದನ್ನು 'ರಾಗಾನುಗಾ' ಭಕ್ತಿಯೆಂದೂ ಕರೆಯುತ್ತಾರೆ. ಇದರ ಅರ್ಥ 'ಭಗವಂತನ ಮೇಲೆ ಅನುರಾಗವನ್ನು ಪಡೆದ ಮೇಲೆ ಬರುವುದು' ಎಂದು. ಸ್ವಾಮಿ ವಿವೇಕಾನಂದರ ಪ್ರಕಾರ, ಒಮ್ಮೆ ಈ ಪರಾಭಕ್ತಿಯು ಮಾನವನಿಗೆ ಪ್ರಾಪ್ತವಾಯಿತೆಂದರೆ, ಅವನ ಮನಸ್ಸು ಅನವರತವೂ ಭಗವಂತನನ್ನು ಕುರಿತೇ ಚಿಂತಿಸುತ್ತಿರುತ್ತದೆ. ಮತ್ತಾವುದನ್ನೂ ಜ್ಞಾಪಿಸಿಕೊಳ್ಳುವುದೇ ಇಲ್ಲ. ಭಗವಂತನಿಲ್ಲದ ಅನ್ಯ ವಿಷಯಗಳಿಗೆ ಅವನ ಮನಸ್ಸಿನಲ್ಲಿ ಜಾಗವೇ ಇರುವುದಿಲ್ಲ. ಅವನ ಮನಸ್ಸು ಯಾವ ಪ್ರಲೋಭನೆಗೂ ಒಳಗಾಗದೆ ಪರಿಶುದ್ಧವಾಗಿರುವುದು. ಇದೇ ಅವನ ಬಂಧನಗಳನ್ನೆಲ್ಲ ತೊಡೆದುಹಾಕುತ್ತದೆ.

ಈ ಪರಾಪ್ರೇಮವನ್ನು ಹಲವು ಭಾವಗಳಲ್ಲಿ ಅನುಭವಿಸಿ ಅರಿತುಕೊಳ್ಳಬಹುದು. ಅವುಗಳೆಂದರೆ, **ಶಾಂತ** (ಉದ್ವೇಗವಿಲ್ಲದ ಪ್ರೀತಿ), **ದಾಸ್ಯ** (ಭಗವಂತನ ದಾಸ ಎಂದು ಭಾವಿಸುವುದು), **ಸಖ್ಯ** ( ದೇವರನ್ನು ಸ್ನೇಹಿತ ಎಂದು ಭಾವಿಸುವುದು), **ವಾತ್ಸಲ್ಯ** (ದೇವರನ್ನು ಮಗುವೆಂದು ಭಾವಿಸುವುದು), **ಮಧುರ** (ಭಗವಂತನನ್ನು ಪ್ರಿಯತಮನೆಂದು ಭಾವಿಸುವುದು).

ಗೋಪಿಯರದು ಮಧುರಭಾವ. ಅದನ್ನು ನಾವು ತಪ್ಪಾಗಿ ತಿಳಿದಿದ್ದೇವೆ. ಅದಕ್ಕೆ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ಬೃಂದಾವನದಲ್ಲಿ ಗೋಪಿಯರು ಎಷ್ಟು ಉತ್ಕಟವಾಗಿ ಶ್ರೀಕೃಷ್ಣನನ್ನು ಪ್ರೀತಿಸಿದರು! ಅದನ್ನು ಮಾನವ ಭಾಷೆ ವಿವರಿಸಲಾಗದು. ಹೇ ಮಾನವ, ನೀನು ಪರಾಭಕ್ತಿಯನ್ನು ಕುರಿತು ಮಾತನಾಡುವೆ. ಜೊತೆಗೆ ಕೆಲಸಕ್ಕೆ ಬಾರದ ಪ್ರಾಪಂಚಿಕ ವ್ಯವಹಾರದಲ್ಲಿಯೂ ನಿರತನಾಗಿರುವೆ. ಇದು ಹೇಗೆ ಸಾಧ್ಯ? 'ರಾಮನಿರುವೆಡೆ ಕಾಮಕ್ಕೆ ಎಡೆಯಿಲ್ಲ. ಕಾಮವಿರುವ ಕಡೆ ರಾಮನಿಗೆ ಎಡೆಯಿಲ್ಲ.' ಅವೆಂದಿಗೂ ಕತ್ತಲೆ ಬೆಳಕಿನಂತೆ ಒಟ್ಟಿಗೆ ಇರಲಾರದವು."

## ಪ್ರೇಮತ್ರಿಕೋನ

ಮುಂದೆ ಪ್ರೇಮತ್ರಿಭುಜದ ಕಲ್ಪನೆಯನ್ನು ಸ್ವಾಮಿ ವಿವೇಕಾನಂದರು ನಮ್ಮ ಮುಂದೆ ಇಡುತ್ತಾರೆ. ಪ್ರೇಮವನ್ನು ನಾವು ಒಂದು ತ್ರಿಕೋನಕ್ಕೆ ಹೋಲಿಸಬಹುದು. ಅದರ ಒಂದೊಂದು ಕೋನವೂ ಒಂದೊಂದು ಅಸಾಧಾರಣ ಗುಣಕ್ಕೆ ನಿದರ್ಶನವಾಗಿದೆ. ಒಂದು ತ್ರಿಕೋನವಾಗಬೇಕಾದರೆ, ಮೂರು ಬಾಹುಗಳು ಇರಲೇಬೇಕು. ಅದೇ ರೀತಿ ನಿಜವಾದ ಪ್ರೇಮಕ್ಕೆ ಮೂರು ಗುಣಗಳು ಇರಲೇಬೇಕು. ಮೊದಲನೆಯ ಗುಣ, **ಪ್ರೇಮಕ್ಕೆ ವ್ಯಾಪಾರದೃಷ್ಟಿ ಇಲ್ಲ** ಎನ್ನುವುದು. ಪ್ರೀತಿ ಯಾವ ಪ್ರತಿಫಲವನ್ನೂ ಆಶಿಸುವುದಿಲ್ಲ. ಪ್ರೀತಿಗಾಗಿ ಪ್ರೀತಿ. ಎರಡನೆಯ ಗುಣ, **ಪ್ರೀತಿಗೆ ಅಂಜಿಕೆ ಇಲ್ಲ** ಎನ್ನುವುದು. ಪ್ರೇಮವು ಎಲ್ಲ ಅಂಜಿಕೆಯನ್ನೂ ಜಯಿಸುತ್ತದೆ. ಯಾರು ದೇವರನ್ನು ನಿಜವಾಗಿ ಪ್ರೀತಿಸುತ್ತಾರೋ, ಅವರು ಎಂದಿಗೂ ಯಾವುದಕ್ಕೂ ಹೆದರುವುದಿಲ್ಲ. ಮೂರನೆಯ ಗುಣವೆಂದರೆ, **ಪ್ರೇಮಕ್ಕೆ ಎದುರಾಳಿ ಇಲ್ಲ** ಎಂಬುದು. ಪ್ರತಿಯೊಂದು ಜೀವಿಯ

ಶ್ರೇಷ್ಠತಮ ಆದರ್ಶವನ್ನೇ ನಾವು 'ದೇವರು' ಎನ್ನುವುದು. ಇದು ಎಂದಿಗೂ ಬತ್ತದ ಆದರ್ಶ. ಇದರ ಶಕ್ತಿ ಮತ್ತು ಪ್ರೇರಣೆಯು ಮಾನವನಲ್ಲಿ ಸದಾ ಕೆಲಸ ಮಾಡುತ್ತಿರುತ್ತದೆ. ಹೀಗಾಗಿ ಇಲ್ಲಿ ಸ್ಪರ್ಧೆಯ ಭಾವನೆಗೆ ಅವಕಾಶವೇ ಇಲ್ಲ.

### ಪರಿಪೂರ್ಣ ಭಕ್ತ

ಈ ಬಗೆಯ ಪ್ರೇಮವನ್ನು ಮೈಗೂಡಿಸಿಕೊಂಡ ಭಕ್ತನಲ್ಲಿ ತಾನು ದೇವರಿಂದ ಪ್ರತ್ಯೇಕ ಎಂಬ ಅಲ್ಪತನವಿರುವುದಿಲ್ಲ. ಭಕ್ತಿ ಎನ್ನುವುದು ವಿಶ್ವಪ್ರೇಮ. ಅದಕ್ಕೆ ಮಿತಿಯಿಲ್ಲ. ಅದು ಪರಿಪೂರ್ಣ. ಇಂತಹ ಭಕ್ತನು ದೇವರಿಗೆ ಕೂಡ, "ನನ್ನ ಸರ್ವಸ್ವವನ್ನೂ ನಿನಗೆ ಅರ್ಪಿಸುವೆನು. ನಿನ್ನಿಂದ ನನಗೆ ಏನೂ ಬೇಕಾಗಿಲ್ಲ. ನನ್ನದು ಎಂದು ಹೇಳಿಕೊಳ್ಳುವುದಕ್ಕೆ ನನ್ನಲ್ಲಿ ಏನೂ ಇಲ್ಲ" ಎನ್ನುವನು. ಈ ಭಾವ ಯಾರಲ್ಲಿ ದೃಢಪಟ್ಟಿದೆಯೋ, ಅವನಲ್ಲಿ ಪರಮ ಪ್ರೇಮವೇ ಆದರ್ಶವಾಗುತ್ತದೆ. ಅಂಥ ಭಕ್ತನ ಪ್ರಾರ್ಥನೆ ಹೇಗಿರುತ್ತದೆ ಎಂದು ಸ್ವಾಮಿ ವಿವೇಕಾನಂದರು ಹೀಗೆ ತಿಳಿಸುತ್ತಾರೆ: "ಹೇ ದೇವರೇ, ನಿನ್ನ ಹೆಸರಿನಲ್ಲಿ ಮುಗಿಲನ್ನು ಮುಟ್ಟುವ ದೇಗುಲವನ್ನು ಕಟ್ಟುತ್ತಾರೆ. ನಿನ್ನ ಹೆಸರಿನಲ್ಲಿ ದೊಡ್ಡ ದಾನ ಧರ್ಮ ಮಾಡುತ್ತಾರೆ. ನಾನು ದೀನ. ನನ್ನಲ್ಲಿ ಏನೂ ಇಲ್ಲ. ಆದಕಾರಣ ನನ್ನ ದೇಹವನ್ನು ನಿನ್ನ ಪಾದಾರವಿಂದದಲ್ಲಿ ಇಡುವೆನು. ದೇವರೆ, ನನ್ನನ್ನು ತ್ಯಜಿಸಬೇಡ."

ಇಂಥ ಭಕ್ತನು ದೇವರನ್ನು ನೋಡಲು ದೇವಸ್ಥಾನ, ಚರ್ಚುಗಳಿಗೆ ಹೋಗುವುದಿಲ್ಲ ಎಂದು ಸ್ವಾಮೀಜಿ ಹೇಳುತ್ತಾರೆ. ಏಕೆಂದರೆ ದೇವರಿಲ್ಲದ ಸ್ಥಳವೇ ಅವನಿಗೆ ಕಾಣುವುದಿಲ್ಲ. ಅಂಥ ಭಕ್ತ ದೇವರನ್ನು ದೇವಸ್ಥಾನದ ಒಳಗೆ ಮತ್ತು ಹೊರಗೆ – ಎಲ್ಲ ಕಡೆ ನೋಡುತ್ತಾನೆ. ಅವನು ದೇವರನ್ನು ಸಜ್ಜನರಲ್ಲಿ ಕಂಡಹಾಗೆ ದುರ್ಜನರಲ್ಲಿಯೂ ಕಾಣುತ್ತಾನೆ. ಅಂಥ ಭಕ್ತನ ಹೃದಯದಲ್ಲಿ ಭಗವಂತನು ಈಗಾಗಲೇ ಮಹಿಮಾನ್ವಿತವಾಗಿ ನಿರಂತರ ಪ್ರಕಾಶಿಸುತ್ತಿರುತ್ತಾನೆ; ಅನುಗಾಲವೂ ಇರುವ ನಂದದ ಪ್ರೇಮಜ್ಯೋತಿಯಾಗಿ ನೆಲೆಸಿರುತ್ತಾನೆ.

ಹೀಗೆ ಸ್ವಾಮಿ ವಿವೇಕಾನಂದರು ಪರಿಶುದ್ಧ ಭಕ್ತಿಯ ಪರಿಚಯವನ್ನು ನಮಗೆ ಮಾಡಿಸುತ್ತಾರೆ. ಆ ಮಾರ್ಗದಲ್ಲಿ ಮುನ್ನಡೆದು ಧನ್ಯರಾಗುವಂತೆ ಪ್ರೇರೇಪಿಸುತ್ತಾರೆ. •

## ಸುದ್ದಿ ಸಂಚಯ

ಮೈಸೂರಿನ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಒಂದಾದ ಶ್ರೀರಾಮಕೃಷ್ಣ ವಿದ್ಯಾಶಾಲೆಯು ೨೦೧೦ ರ ಡಿಸೆಂಬರ್ ೨೫ ರಂದು ತನ್ನ ೫೮ನೇ ವಾರ್ಷಿಕೋತ್ಸವವನ್ನು ಅತ್ಯಂತ ವಿಜೃಂಭಿತವಾಗಿ ಆಚರಿಸಿಕೊಂಡಿತು. ಮೊದಲಿಗೆ ಮೈದಾನದಲ್ಲಿ ವಿದ್ಯಾರ್ಥಿಗಳು ನಡೆಸಿಕೊಟ್ಟ ಪಥಸಂಚಲನ, ಕವಾಯಿತು, ವ್ಯಾಯಾಮ ಮುಂತಾದವು ಅತ್ಯುತ್ತಮವಾಗಿ ಮೂಡಿಬಂದವು. ಸಂಜೆ ೬.೩೦ಕ್ಕೆ ನಡೆದ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಇನ್ಫೋಸಿಸ್ ಸಂಸ್ಥೆಯ ಸಂಸ್ಥಾಪಕ ಶ್ರೀ ಎನ್. ಆರ್. ನಾರಾಯಣಮೂರ್ತಿಯವರು ಭಾಗವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕಾದ ಮೌಲ್ಯಗಳ ಬಗ್ಗೆ ಮಾತನಾಡಿದರು. ಎಂಥ ಪರಿಸ್ಥಿತಿಯಲ್ಲೂ ನ್ಯಾಯಯುತವಾದ ಮಾರ್ಗವನ್ನು ಎದೆಗಾರಿಕೆಯಿಂದ ಅನುಸರಿಸುವುದೇ ಧೈರ್ಯ. ಬಹಳಷ್ಟು ಜನರು ಹಿಂದೆ ಉಳಿಯಲು ಮತ್ತು ಸೋಲಲು ಈ ಬಗೆಯ ಧೈರ್ಯದ ಕೊರತೆಯೇ ಕಾರಣ. ಇದರ ಜೊತೆಗೆ ಶಿಸ್ತನ್ನೂ ಮೈಗೂಡಿಸಿಕೊಳ್ಳಬೇಕು. ಶಿಸ್ತಿನಿಂದ ಅತ್ಯಂತ ಕಠಿಣ ಪರಿಸ್ಥಿತಿಯನ್ನೂ ಸಮರ್ಥವಾಗಿ ನಿರ್ವಹಿಸಬಹುದು. ಇನ್ನು, ಕೇವಲ ವ್ಯಕ್ತಿಗತವಾಗಿ ಕೆಲಸ ಮಾಡದೆ ಒಂದು ತಂಡವಾಗಿ ಕೆಲಸ ಮಾಡುವುದರಿಂದ ಪರಸ್ಪರರ ಸಹಕಾರ ಲಭಿಸಿ, ಎಲ್ಲರೂ ಬೆಳೆಯುವದಕ್ಕೆ ಅವಕಾಶವಿರುತ್ತದೆ. ವಿದ್ಯಾರ್ಥಿಗಳು ಇಂತಹ ಮೌಲ್ಯಗಳನ್ನು ಬೆಳೆಸಿಕೊಂಡು ಯಶಸ್ಸನ್ನು ಸಾಧಿಸಬೇಕು ಎಂದು ಶ್ರೀ ನಾರಾಯಣಮೂರ್ತಿ ಕರೆ ನೀಡಿದರು. ಭಾರತದ ಪ್ರತಿಯೊಂದು ರಂಗದಲ್ಲಿಯೂ ತಾಂಡವವಾಡುತ್ತಿರುವ ಭ್ರಷ್ಟಾಚಾರದ ಬಗ್ಗೆ ಮಾತನಾಡಿ, ವಿದ್ಯಾರ್ಥಿಗಳು ಅದರ ನಿರ್ಮೂಲನೆಗೆ ಸಂಕಲ್ಪಮಾಡಬೇಕಾದ ಆವಶ್ಯಕತೆಯನ್ನೂ ಅವರು ಒತ್ತಿ ಹೇಳಿದರು. ಈ ಸಂದರ್ಭದಲ್ಲಿ, ಮಕ್ಕಳಿಂದ ಭಜನೆ, ವಾದ್ಯವೃಂದ, ಭರತನಾಟ್ಯಗಳು ನಡೆದವು. ಅನಂತರ, **'ಶ್ರೀಕೃಷ್ಣಂ ವಂದೇ ಜಗದ್ಗುರುಮ್'** ಎಂಬ ನಾಟಕವು ಬಹಳ ಪರಿಣಾಮಕಾರಿಯಾಗಿ ಮೂಡಿಬಂದಿತು. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ, ವಿದ್ಯಾಶಾಲೆಯ ಮುಖ್ಯಸ್ಥರಾದ ಸ್ವಾಮಿ ಮುಕ್ತಿದಾನಂದಜಿ ಹಾಗೂ ಪ್ರಾಂಶುಪಾಲರಾದ ಶ್ರೀ ಎಸ್. ಬಾಲಾಜಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. •



ಎಡದಿಂದ, ಶ್ರೀ ಬಾಲಾಜಿ, ಸ್ವಾಮಿ ನಿತ್ಯಸ್ಥಾನಂದಜಿ,
ಶ್ರೀ ನಾರಾಯಣಮೂರ್ತಿ, ಸ್ವಾಮಿ ಮುಕ್ತಿದಾನಂದಜಿ

ಬ್ರಹ್ಮಚಾರಿ ಸುವಿಮಲಚೈತನ್ಯ

# ಸ್ವಾಮಿ ವಿವೇಕಾನಂದರ 'ಕರ್ಮಯೋಗ'

**ಈ**ಗಿನ ಕಾಲವನ್ನು ಐ.ಟಿ. ಯುಗ ಎಂದು ಕರೆಯುತ್ತೇವೆ. ಇಂದು ನಾವು ಕಾಣುವುದು ಸ್ಪರ್ಧಾತ್ಮಕ ಸಮಾಜವನ್ನು. ಇದರಲ್ಲಿ ಲಿಂಗಭೇದವಿಲ್ಲದೆ, ಹಗಲು–ಇರುಳೆನ್ನದೆ ಪ್ರತಿಯೊಬ್ಬನೂ ತುಂಬ ಪರಿಶ್ರಮಿಸಬೇಕಾಗಿದೆ. ವಿದ್ಯಾರ್ಥಿ, ಅಧಿಕಾರಿ, ಗುಮಾಸ್ತ, ವಯಸ್ಕರು, ಮುದುಕರು – ಯಾರನ್ನು ನೋಡಿದರೂ ಎಲ್ಲರೂ ವ್ಯಸ್ತರಾಗಿರುತ್ತಾರೆ. ಅಚ್ಚರಿಯ ಸಂಗತಿ ಎಂದರೆ, ಎಷ್ಟೇ ಕೆಲಸ ಮಾಡುತ್ತಿದ್ದರೂ, ಅವರಲ್ಲಿ ಬಹಳಷ್ಟು ಜನರಲ್ಲಿ ಸಂತಸ ಮತ್ತು ತೃಪ್ತಿಗಳು ಕಾಣಸಿಗುವುದಿಲ್ಲ. ಸಂತೋಷ ಮತ್ತು ತೃಪ್ತಿಗಾಗಿ ಬೇರೆಲ್ಲೋ ಕಡೆ ಅವರು ಹುಡುಕುತ್ತಿದ್ದಾರೆ ಎನ್ನಿಸುತ್ತದೆ. ಜನರು ವಾರಾಂತ್ಯ ಮತ್ತು ರಜಾದಿನಗಳಿಗೆ ಕಾತರದಿಂದ ಕಾಯುವುದೇ ಇದಕ್ಕೆ ಸಾಕ್ಷಿ.

ಇದಕ್ಕೆ ಕಾರಣ, ಅವರು ದಿನದ ಹೆಚ್ಚಿನ ಭಾಗವನ್ನು ಕೆಲಸಗಳನ್ನು ಮಾಡಲು ಕಳೆದರೂ, ಅದರಿಂದ ಅವರಿಗೆ ಯಾವ ರೀತಿಯ ನೆಮ್ಮದಿ, ತೃಪ್ತಿ, ಸುಖ ಸಿಕ್ಕುತ್ತಿಲ್ಲ. ಕೆಲಸವು ಅವರಿಗೆ ಹೊರೆಯಾಗಿದೆ. ಆದ್ದರಿಂದ ಅವರು ರಂಗಮಂದಿರಗಳು, ರೆಸಾರ್ಟ್‌ಗಳು ಅಥವಾ ಮನರಂಜನೆಯನ್ನು ಕೊಡುವ ಇನ್ನಿತರ ಹೊಸ ಹೊಸ ಸಾಧನಗಳನ್ನು ಹುಡುಕುತ್ತಿದ್ದಾರೆ. ಅವರು ದಿನನಿತ್ಯ ಮಾಡುವ ಕೆಲಸಗಳು ಅವರ ಜೀವನದ ಮೂಲಭೂತ ಸೌಕರ್ಯಗಳನ್ನು ದೊರಕಿಸಿಕೊಡಲು ನೆರವಾಗುತ್ತಿವೆಯೇ ಹೊರತು, ಅವರ ಮನಸ್ಸಿಗೆ ತೃಪ್ತಿಯನ್ನೂ ಆನಂದವನ್ನೂ ನೀಡಲು ಅಸಮರ್ಥವಾಗಿವೆ. ಅನ್ನಬಟ್ಟೆಗಳನ್ನು ನೀಡುವುದಕ್ಕಿಂತ ಮಿಗಿಲಾಗಿ, ಸ್ವಂತ ವ್ಯಕ್ತಿತ್ವವನ್ನು ರೂಪಿಸುವ ಹಾಗೂ ಆತ್ಮತೃಪ್ತಿಯನ್ನು ನೀಡುವ ಸಾಮರ್ಥ್ಯ ಕರ್ಮಕ್ಕಿದೆ ಎನ್ನುವುದು ಅವರಿಗೆ ಗೊತ್ತಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಇರುವವರಿಗೆ ಸ್ವಾಮಿ ವಿವೇಕಾನಂದರ 'ಕರ್ಮಯೋಗ'ವು ದಾರಿದೀಪದಂತಿದೆ.



ಕರ್ಮವು ಮಾನವ ಜೀವಿತದ ಅವಿನಾಭಾವ ಅಂಶ. ಸಾಮಾನ್ಯ ಕರ್ಮವು ಬಂಧನಕ್ಕೆ ಈಡುಮಾಡುತ್ತದೆ. ಕರ್ಮಯೋಗವು ಜೀವನಕ್ಕೆ ಸಾರ್ಥಕತೆಯನ್ನು ತಂದುಕೊಡುತ್ತದೆ. ಸ್ವಾಮಿ ವಿವೇಕಾನಂದರ ಕರ್ಮಯೋಗ ಒಂದು ವಿಶಿಷ್ಟವಾದ, ಅತ್ಯಂತ ಪ್ರಯೋಜನಕಾರಿಯಾದ ಗ್ರಂಥ. ಇದರಲ್ಲಿ ಬರುವ ವಿಷಯಗಳನ್ನು ಸರಳವಾಗಿ, ಸೂಕ್ತ ಉದಾಹರಣೆಗಳೊಡನೆ ವಿವರಿಸಿರುವ ಲೇಖಕರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

## ಕರ್ಮ ಎಂದರೇನು?

'ಕರ್ಮ' ಎಂಬ ಪದಕ್ಕೆ ಹಲವಾರು ಅರ್ಥಗಳಿವೆ. ಶಂಕರಾಚಾರ್ಯರು 'ಕರ್ಮ' ಪದವನ್ನು ಸಕಾಮಕರ್ಮ ಎಂದು ವಿವರಿಸಿದ್ದಾರೆ. ಸ್ವಾಮಿ ಶಾರದಾನಂದಜಿ ಅವರು ತಮ್ಮ ಉಪನ್ಯಾಸಗಳಲ್ಲಿ 'ಕರ್ಮ'ವನ್ನು 'ಕೆಲಸದ ಫಲ' ಎಂಬ ಅರ್ಥದಲ್ಲಿ ಉಪಯೋಗಿಸಿದ್ದಾರೆ. ಆದರೆ ಸ್ವಾಮಿ ವಿವೇಕಾನಂದರ ಪ್ರಕಾರ, 'ಕರ್ಮ' ಎಂದರೆ, ಎಲ್ಲಾ ರೀತಿಯ 'ಕ್ರಿಯೆ' ಅಥವಾ 'ಕೆಲಸ' ಎಂದರ್ಥ.

ಕರ್ಮ ಎಂಬ ಪದವು 'ಕೃ – ಮಾಡು' ಎನ್ನುವ ಧಾತುವಿನಿಂದ ಹುಟ್ಟಿದೆ. ಈ ವಿಶಾಲಾರ್ಥದಲ್ಲಿ ಸ್ವಾಮಿ ವಿವೇಕಾನಂದರು 'ಕರ್ಮ' ಪದವನ್ನು ಉಪಯೋಗಿಸಿದ್ದಾರೆ. ಅದಲ್ಲದೆ, ಅದನ್ನು ಪ್ರಯತ್ನ, ಕರ್ತವ್ಯ, ಸಂಸ್ಕಾರ ಎನ್ನುವ ಅರ್ಥಗಳಲ್ಲೂ ಬಳಸಿದ್ದಾರೆ. ಮನುಷ್ಯನು ಮಾಡುವ ಯಾವುದೇ ಕ್ರಿಯೆ ಅಥವಾ ಕೆಲಸ ಮತ್ತು ಅದರ ಪ್ರಭಾವ, ಫಲಗಳನ್ನು ಒಟ್ಟಾರೆ 'ಕರ್ಮ' ಎಂದು ಕರೆಯಬಹುದು. ಅದಲ್ಲದೆ, ಮಾತನಾಡುವುದು, ನಡೆದಾಡುವುದು, ಉಸಿರಾಡುವುದು ಮುಂತಾದ ಸಹಜ ಕ್ರಿಯೆಗಳೂ ಕರ್ಮವೇ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

### ಯೋಗ ಎಂದರೇನು?

ಯೋಗ ಎಂದರೆ ಇಲ್ಲಿ 'ಕೂಡುವಿಕೆ' ಎಂದರ್ಥ. ಜೀವಾತ್ಮನು ಪರಮಾತ್ಮನ ಜೊತೆಗೆ ಕೂಡುವುದಕ್ಕೆ, ಮಿಲನವಾಗುವುದಕ್ಕೆ 'ಯೋಗ' ಎಂದು ಹೆಸರು. ಭಕ್ತನು 'ಭಕ್ತಿ'ಯಿಂದ, ಜ್ಞಾನಿಯು 'ಜ್ಞಾನ'ದ ಸಹಾಯದಿಂದ, ಪರಮಪದವನ್ನು ಪಡೆಯುತ್ತಾನೆ. ಇದರಂತೆಯೇ, ಕರ್ಮಯೋಗಿಯು ಕರ್ಮಕೌಶಲದಿಂದ ಅಂದರೆ, ಯಾವುದೇ ಫಲಾಪೇಕ್ಷೆಯಿಲ್ಲದೆ ಕರ್ಮವನ್ನು ಮಾಡುವ ಮೂಲಕ ಅದೇ ಗತಿಯನ್ನು ಹೊಂದುತ್ತಾನೆ. ಸಂಕ್ಷೇಪವಾಗಿ ಹೇಳುವುದಾದರೆ, ನಾವು ಮಾಡಬೇಕಾದ ಕರ್ಮವನ್ನು ಸ್ವಾರ್ಥರಹಿತರಾಗಿ, ಶ್ರದ್ಧೆಯಿಂದ, ಫಲಾಪೇಕ್ಷೆಯಿಲ್ಲದೆ ಉತ್ತಮ ರೀತಿಯಲ್ಲಿ ಮಾಡಿದರೆ ಅದು 'ಕರ್ಮಯೋಗ' ಎನಿಸಿಕೊಳ್ಳುತ್ತದೆ. ಸ್ವಾಮಿ ವಿವೇಕಾನಂದರು, ತಮ್ಮ ಕರ್ಮಯೋಗದ ಉಪನ್ಯಾಸಗಳಲ್ಲಿ, 'ಕರ್ಮಯೋಗದ ಆದರ್ಶ', 'ಕರ್ಮರಹಸ್ಯ', 'ನಾವು ಮಾಡುವ ಕರ್ಮದಿಂದ ನಮಗೇ ಒಳಿತು, ಇತರರಿಗಲ್ಲ' ಮತ್ತು 'ಕರ್ಮದಿಂದ ನಮ್ಮ ಶೀಲದ ಮೇಲೆ ಉಂಟಾಗುವ ಪರಿಣಾಮ' ಮುಂತಾದ ವಿಷಯಗಳನ್ನು ಕುರಿತು ಚರ್ಚಿಸುತ್ತಾರೆ.

### ಕರ್ಮವು ಅನಿವಾರ್ಯ

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು, "ಯಾರೂ ಕೂಡ, ಒಂದು ಕ್ಷಣವಾದರೂ ಕರ್ಮವನ್ನು ಮಾಡದೆ ಇರಲು ಆಗುವುದಿಲ್ಲ" ಎಂದು ಹೇಳುತ್ತಾನೆ. ಇದು ನಮ್ಮ ಜೀವನದಲ್ಲಿ ಕರ್ಮದ ಅನಿವಾರ್ಯತೆಯನ್ನು ಸೂಚಿಸುತ್ತದೆ. 'ಗಂಗೆಯ ನೀರಿನಿಂದ ಗಂಗೆಯ ಪೂಜೆ' ಎಂಬ ಮಾತಿದೆ. ಅದರಂತೆ, ಕರ್ಮ ಮಾಡುವುದರಿಂದಲೇ ಕರ್ಮಬಂಧನದಿಂದ ಬಿಡಿಸಿಕೊಳ್ಳಲು ಸಾಧ್ಯ. ಇದೇ ಕರ್ಮಯೋಗದ ವೈಶಿಷ್ಟ್ಯ.

### ಕರ್ಮದಲ್ಲಿ ಮೇಲು-ಕೀಳೆಂಬ ಭೇದ ಭಾವವಿಲ್ಲ

ಕರ್ಮವನ್ನು ಎಲ್ಲರೂ ಮಾಡುತ್ತಾರೆ. ರಾಜನು ರಾಜ್ಯವಾಳುವ ಕೆಲಸ ಮಾಡುತ್ತಾನೆ; ಸಾಮಾನ್ಯನೊಬ್ಬನು ಬಾಗಿಲು ಕಾಯುವ ಕೆಲಸ ಮಾಡಬಹುದು. ಆದರೆ ಜನರು ಕರ್ಮವನ್ನು 'ಯಾವ ಭಾವನೆಯಿಂದ ಮಾಡುತ್ತಿದ್ದಾರೆ', 'ಯಾವ ಉದ್ದೇಶದಿಂದ ಮಾಡುತ್ತಿದ್ದಾರೆ' ಎನ್ನುವುದು ಮುಖ್ಯವೇ ಹೊರತು, 'ಏನನ್ನು ಮಾಡುತ್ತಿದ್ದಾರೆ' ಎನ್ನುವುದು ಮುಖ್ಯವಲ್ಲ.

### ಶೀಲದ ಮೇಲೆ ಕರ್ಮದ ಪರಿಣಾಮ

ಒಳ್ಳೆಯ ಕೆಲಸಗಳಿಂದ ಮನುಷ್ಯನು ಸಜ್ಜನನಾಗುತ್ತಾನೆ; ಕೆಟ್ಟ ಕೆಲಸಗಳಿಂದ ದುಷ್ಟನಾಗುತ್ತಾನೆ (*ಬೃಹದಾರಣ್ಯಕ ಉಪನಿಷತ್ತು*, ೪:೪:೧೩).

"ಹನಿ ಹನಿ ಕೂಡಿದರೆ ಹಳ್ಳ ಅಥವಾ ಬಿತ್ತಿದಂತೆ ಬೆಳೆ" ಎಂಬ ಮಾತಿದೆ. ಅದರಂತೆ, ಮರವು ಸಾಮಾನ್ಯ ಬೀಜವೊಂದರಿಂದ ಹುಟ್ಟುತ್ತದೆ. ಹಾಗೆಯೇ ನಾವು ಮಾಡುವ ಪ್ರತಿಯೊಂದು ಕೆಲಸ, ಆಲೋಚನೆ ಮತ್ತು ಚಿಂತನೆಗಳೇ ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತವೆ. ಅವುಗಳ ಒಟ್ಟು ಮೊತ್ತವೇ ಒಬ್ಬ ವ್ಯಕ್ತಿಯ ಚಾರಿತ್ರ್ಯ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅದು ಕಾಯಿಕ, ವಾಚಿಕ ಮತ್ತು ಮಾನಸಿಕ – ಇದಾವುದೇ ಆಗಿರಬಹುದು. ಹೀಗೆ ಪ್ರತಿಯೊಂದು ಕರ್ಮವೂ ತನ್ನದೇ ಆದ ಮಟ್ಟದಲ್ಲಿ ನಮ್ಮ ಜೀವನದ ಮೇಲೆ ಅದರ ಪರಿಣಾಮವನ್ನು ಬೀರುತ್ತದೆ. ಬೇವಿನ ಬೀಜವನ್ನು ಬಿತ್ತಿದಲ್ಲಿ ಬೇವಿನ ಮರವೇ ಹುಟ್ಟುತ್ತದೆಯೇ ಹೊರತು, ಮಾವಿನಮರ ಹುಟ್ಟುವುದಿಲ್ಲ. ಹೀಗೆ ನಮ್ಮ ವ್ಯಕ್ತಿತ್ವವು ಕೂಡ ನಾವು ಮಾಡುವ ಕರ್ಮದ ಮೇಲೆಯೇ ಅವಲಂಬಿತವಾಗಿದೆಯೇ ಹೊರತು, ಬೇರೆ ಯಾವುದರ ಮೇಲೂ ಅಲ್ಲ.

ಸ್ವಾಮಿ ವಿವೇಕಾನಂದರು ಕರ್ಮವು ಶೀಲ ಅಥವಾ ಚಾರಿತ್ರ್ಯದ ಮೇಲೆ ಬೀರುವ ಪರಿಣಾಮವನ್ನು ಕುರಿತು ಹೀಗೆ ಹೇಳುತ್ತಾರೆ: "ಈ ಪ್ರಪಂಚದಲ್ಲಿ ನಮ್ಮ ಕಣ್ಣಿಗೆ ಬೀಳುವ ಎಲ್ಲ ಕರ್ಮಗಳೂ, ಮಾನವ ಸಮಾಜದಲ್ಲಿ ಆಗುವ ಸಮಸ್ತ ಚಲನೆಗಳೂ, ನಮ್ಮ ಸುತ್ತಲೂ ನಡೆಯುವ ಕಾರ್ಯಗಳು ಕೂಡ ಆಲೋಚನೆಗಳ ಪ್ರದರ್ಶನ, ಮನುಷ್ಯನ ಇಚ್ಛಾಶಕ್ತಿಯ ಅಭಿವ್ಯಕ್ತಿ. ಯಂತ್ರಗಳು, ಸಾಧನಗಳು, ಪಟ್ಟಣಗಳು, ಹಡಗುಗಳು, ಯುದ್ಧನೌಕೆಗಳು – ಇವೆಲ್ಲವೂ ಮನುಷ್ಯನ ಇಚ್ಛಾಶಕ್ತಿಯ ಅಭಿವ್ಯಕ್ತಿ ಮಾತ್ರ. ಈ ಇಚ್ಛಾಶಕ್ತಿಗೆ ಮೂಲ, ಶೀಲ. ಈ ಶೀಲವು ಕರ್ಮದ ಮೂಲಕ ರೂಪಗೊಳ್ಳುತ್ತದೆ. ಕರ್ಮ ಹೇಗೋ, ಅದಕ್ಕೆ ಅನುಸಾರವಾಗಿ ಇಚ್ಛಾಶಕ್ತಿಯ ಅಭಿವ್ಯಕ್ತಿ. ಪ್ರಚಂಡ ಇಚ್ಛಾಶಕ್ತಿಯುಳ್ಳವರೆಲ್ಲರೂ ಅದ್ಭುತ ಕರ್ಮಿಗಳು." ಉದಾಹರಣೆಗೆ ಒಬ್ಬ ಕ್ರೀಡಾಪಟುವು ನಿಯಮಿತವಾಗಿ ಕ್ರೀಡೆಯನ್ನು ಅಭ್ಯಾಸ ಮಾಡಿದಲ್ಲಿ ಮಾತ್ರವೇ ಉತ್ತಮ ಕ್ರೀಡಾಪಟುವಾಗಲು ಸಾಧ್ಯ. ಬಹುದಿನಗಳ ಪರಿಶ್ರಮದಿಂದ ಮಾತ್ರವೇ ಒಬ್ಬನು ಉತ್ತಮ ಕ್ರೀಡಾಪಟುವಾಗಬಲ್ಲನು.

ಇದಕ್ಕೆ ಸಂಬಂಧಿಸಿದಂತೆ ಒಂದು ತಮಾಷೆಯ ಪ್ರಸಂಗ ಇದೆ. ಒಬ್ಬ ಪಾದ್ರಿ, ಸಾಯುವ ಸಮಯದಲ್ಲಿ ದೇವರನ್ನು ಚಿಂತಿಸಿದರೆ, ತಾನು ಸ್ವರ್ಗವನ್ನು ಪಡೆಯಬಹುದು ಎಂದುಕೊಂಡಿದ್ದನು. ಸ್ವರ್ಗವನ್ನು ಸೇರಲು ಇದು ಸುಲಭಮಾರ್ಗ ಎಂದು ಅವನು ಎಣಿಸಿದ್ದನು. ಆದರೆ ಅವನು ಯಾವಾಗಲೂ ಕೆಲಸದ ಮಧ್ಯದಲ್ಲಿ, ದೇವರನ್ನು ಚಿಂತಿಸುವ ಬದಲಾಗಿ ತನ್ನ ಕಷ್ಟಗಳ ಬಗ್ಗೆಯೇ ನೆನೆಯುತ್ತಾ, "ಎಂತಹ ನರಕ! ಎಂತಹ ನರಕ!" ಎನ್ನುತ್ತಿದ್ದನು. ಅದು ಅವನಿಗೆ ಬಾಯಿಪಾಠವೇ ಆಗಿಹೋಗಿತ್ತು. ಹೀಗಿರುವಾಗ,